## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಜಿ.ವಿ.ಪ್ರಕಾಶ್, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ ಹಾಗೂ ಇನ್ನಿತರರ ವಿರುದ್ಧ ಶಿಸ್ತು ಕ್ರಮ - ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಬಗ್ಗೆ - ಆದೇಶ.

ಓದಲಾಗಿದೆ:- 1) ಸಹಾಯಕ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. Compt/ Uplok/ BD/402/ 2014 / ARLO-1 ದಿನಾಂಕ. 06-08-2015.

2) ಮಾನ್ಯ ಉಪ ಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ Compt/ Uplok/ BD/402/ 2014 / ARLO-1 ದಿನಾಂಕ. 05-08-2015.

-----

### ಪ್ರಸ್ತಾವನೆ

ಸಹಾಯಕ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 06-08-2015ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರವರು ಲೋಕಾಯುಕ್ತ ಕಾಯ್ದೆ 12 (3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ಎ.ಮಲ್ಲಪ್ಪ ಬಿನ್ ನಾಗಪ್ಪ, ಅಗಸನಹಳ್ಳಿ ಇವರು ಶ್ರೀ ಜಿ.ವಿ.ಪ್ರಕಾಶ್, ಸಹಾಯಕ ಇಂಜಿನಿಯರ್ ಇವರು ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಅಗಸನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 13ನೇ ಹಣಕಾಸಿನ ಕ್ರಿಯಾ ಯೋಜನೆಯಡಿಯಲ್ಲಿ ಅಗಸನಹಳ್ಳಿ ಗ್ರಾಮದಲ್ಲಿ ಕೈಗೊಳ್ಳಲಾದ ವಾಣಿಜ್ಯ ಮಳಿಗೆಗಳು ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ಧ್ವಜ ಕಟ್ಟೆಯ ಕಾಮಗಾರಿಗಳು ಕಳಪೆ ಮಟ್ಟದ್ದಾಗಿ ನಿರ್ಮಿಸಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂದು ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ.

ಸದರಿ ದೂರಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಕಚೇರಿಯವರು ಶ್ರೀ ಜಿ.ವಿ.ಪ್ರಕಾಶ್, ಸಹಾಯಕ ಇಂಜಿನಿಯರ್ ಇವರಿಂದ ಆಕ್ಷೇಪಣೆಯನ್ನು ಕೇಳಿದ್ದು, ಸದರಿಯವರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಅಗಸನಹಳ್ಳಿ ಗ್ರಾಮದಲ್ಲಿ ಕೈಗೊಳ್ಳಲಾದ ವಾಣಿಜ್ಯ ಮಳಿಗೆಗಳು ಹಾಗೂ ಶಾಲೆಯ ಧ್ವಜ ಸ್ತಂಭ ಕಾಮಗಾರಿಗಳಿಗೆ ಉತ್ತಮ ಗುಣಮಟ್ಟದ ಸಾಮಾಗ್ರಿಗಳನ್ನು ಉಪಯೋಗಿಸಿ ಗ್ರಾಮ ಪಂಚಾಯತ್ ಸದಸ್ಯರು ಮತ್ತು ಅಧ್ಯಕ್ಷರ ಸಮ್ಮುಖದಲ್ಲಿ ಮಾಡಲಾಗಿದೆ ಎಂದು, ದೂರುದಾರರು ಮತ್ತು ಕಾಮಗಾರಿ

---2

ಮಾಡಿದ ಗುತ್ತಿಗೆದಾರರ ಮಧ್ಯೆ ವೈಮನಸ್ಸು ಇರುವುದರಿಂದ, ದೂರುದಾರರು ತಮ್ಮ ವಿರುದ್ಧ ಸುಳ್ಳು ಆರೋಪವನ್ನು ಮಾಡಿದ್ದಾರೆಂದು ತಿಳಿಸುತ್ತಾ, ದೂರಿನಲ್ಲಿ ಮಾಡಿರುವ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ಶ್ರೀ ಜಿ.ವಿ.ಪ್ರಕಾಶ್, ಸಹಾಯಕ ಇಂಜಿನಿಯರ್ ರವರ ಆಕ್ಷೇಪಣೆಯ ಬಗ್ಗೆ ಪುನ: ದೂರುದಾರರ ಅಭಿಪ್ರಾಯವನ್ನು ಕೇಳಲಾಗಿದ್ದು, ದೂರುದಾರರು ಸದರಿ ಆಕ್ಷೇಪಣೆಯನ್ನು ಒಪ್ಪದೆ, ದೂರಿನಲ್ಲಿಯ ಅಂಶಗಳನ್ನೇ ಪುನರುಚ್ಚರಿಸಿದ್ದಾರೆಂದು ತಿಳಿಸಲಾಗಿದೆ.

ನಂತರ ಕರ್ನಾಟಕ ಲೋಕಾಯುಕ್ತ ಕಚೇರಿಯು ಸದರಿ ಪ್ರಕರಣದಲ್ಲಿ ತನಿಖೆಯನ್ನು ಕೈಗೊಂಡು ಸಲ್ಲಿಸಿರುವ ವರದಿಯಲ್ಲಿ, ವಾಣಿಜ್ಯ ಮಳಿಗೆಯ ಅನುಮೋದಿತ ಅಂದಾಜಿನಲ್ಲಿ 2 ಟ್ರೆಸ್‌ಗಳನ್ನು ಅಳವಡಿಸಿ, ಇದರ ಮೇಲೆ ಎಸಿ ಶೀಟ್‌ಗಳನ್ನು ಹಾಕಲು ಅನುವು ಮಾಡಿದ್ದು, ಆದರೆ ಸದರಿ ಕಾಮಗಾರಿಯ ಸ್ಥಳದಲ್ಲಿ ಕೇವಲ 1 ಟ್ರೆಸ್ ಅನ್ನು ಮಾತ್ರ ಅಳವಡಿಸಿ, 2 ಟ್ರೆಸ್‌ಗಳನ್ನು ಅಳವಡಿಸಿರುವುದಾಗಿ ಅಳತೆ ಪುಸ್ತಕದಲ್ಲಿ ನಮೂದಿಸಿದ್ದು, ಅದಕ್ಕೆ ಪಿ.ಡಿ.ಓ. ರವರು ಮೇಲು ರುಜು ಮಾಡಿದ್ದು, 2 ಟ್ರೆಸ್‌ಗಳ ಮೊತ್ತ ರೂ. 36,842/- ಮೊದಲನೇ ಮತ್ತು ಅಂತಿಮ ಬಿಲ್ಲನ್ನು ತಯಾರಿಸಿದ್ದು, ಸದರಿ ಬಿಲ್ಲುಗಳಿಗೆ ಶ್ರೀ ಎಂ.ತಿಮ್ಮಣ್ಣ, ಸ.ಕಾ.ಇಂ., ಪಂ.ರಾ.ಇಂ.ಉಪ ವಿಭಾಗ, ಸೊರಬ ರವರು ಮೇಲು ರುಜು ಮಾಡಿದ್ದು, ಸದರಿ ವಾಣಿಜ್ಯ ಮಳಿಗೆಗಳು ಸುಸ್ಥಿತಿಯಲ್ಲಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು, 1 ಟ್ರೆಸ್‌ನ ಮೊತ್ತವಾದ ರೂ. 18,421/- ಗಳನ್ನು ಹೆಚ್ಚುವರಿಯಾಗಿ ಪಾವತಿ ಮಾಡಿ, ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಸಾಬೀತಾಗಿರುತ್ತದೆ ಎಂದು, ಸದರಿ ಆರ್ಥಿಕ ನಷ್ಟಕ್ಕೆ ಈ ಕೆಳಕಂಡ ಅಧಿಕಾರಿಗಳು ಅವರ ಹೆಸರಿನ ಮುಂದೆ ನಮೂದಿಸಿರುವ ಮೊತ್ತಕ್ಕೆ ಹೊಣೆಗಾರರಾಗಿರುತ್ತಾರೆಂದು ತಿಳಿಸಲಾಗಿದೆ:-

| ಕ್ರ.ಸಂ. | ಹೆಸರು, ಹುದ್ದೆ ಮತ್ತು ಕಚೇರಿ ವಿಳಾಸ | ಆರ್ಥಿಕ ನಷ್ಟದ ಮೊತ್ತ ರೂ. ಗಳಲ್ಲಿ |
|---|---|---|
| 1. | ಶ್ರೀ ಜಿ.ವಿ.ಪ್ರಕಾಶ್,<br>ಸಹಾಯಕ ಇಂಜಿನಿಯರ್,<br>ಪಂ.ರಾ.ಇಂ.ಉಪ ವಿಭಾಗ, ಸೊರಬ | 9,210/- |
| 2. | ಶ್ರೀ ಎಂ.ತಿಮ್ಮಣ್ಣ,<br>ಸಹಾಯಕ ಕಾರ್ಯಪಾಲಕ ಇಂಜಿನಿಯರ್<br>ಪಂ.ರಾ.ಇಂ.ಉಪ ವಿಭಾಗ, ಸೊರಬ | 9,210/- |
| 3. | ಶ್ರೀ ರಾಜಶೇಖರ್ ಪಾಟೀಲ್,<br>ಪಂಚಾಯತ್ ಅಭಿವೃದ್ಧಿ ಅಧಿಕಾರಿ,<br>ಅಗಸನಹಳ್ಳಿ ಗ್ರಾಮ ಪಂಚಾಯತ್,<br>ಸೊರಬ ತಾಲ್ಲೂಕು. | ಅಳತೆ ಪುಸ್ತಕದಲ್ಲಿ ಮೇಲು ಸಹಿ ಮಾಡಿ ಕರ್ತವ್ಯ ಲೋಪವೆಗಿದ್ದಾರೆ. |
| | ಒಟ್ಟು: | 18,421/- |

ಸದರಿ ತನಿಖಾ ವರದಿಯ ಪ್ರತಿಯನ್ನು ಮೇಲಿನ 3 ಆಪಾದಿತರಿಗೆ ಕಳುಹಿಸಿ, ಅವರ ಆಕ್ಷೇಪಣೆಗಳನ್ನು ಕೇಳಲಾಗಿದ್ದು, ಶ್ರೀ ರಾಜಶೇಖರ್ ಪಾಟೀಲ್, ಪಂಚಾಯತ್ ಅಭಿವೃದ್ಧಿ ಅಧಿಕಾರಿರವರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಶ್ರೀ ಜಿ.ವಿ. ಪ್ರಕಾಶ್, ಸಹಾಯಕ ಇಂಜಿನಿಯರ್ ರವರು ಸದರಿ ಕಾಮಗಾರಿಯ ಉಸ್ತುವಾರಿಯನ್ನು ಮಾಡಿ, ಅಳತೆ ಪುಸ್ತಕದಲ್ಲಿ ಅಳತೆಯನ್ನು ಬರೆದಿದ್ದು, ಶ್ರೀ ತಿಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಕಾಮಗಾರಿಗಳನ್ನು ಪರಿವೀಕ್ಷಿಸಿದ್ದು, ಅದಕ್ಕೆ ಅವರು

ಸಹಿ ಮಾಡಿರುತ್ತಾರೆಂದು, ಭಾಗ-3ರ ಒಳಭಾಗದಲ್ಲಿ ಒಂದು ಟ್ರೆಸನ್ನು ಹಾಗೂ ಮಳೆ ಇರಚಲು ಬರದಂತೆ ತಗಡಿಗೆ ಆಧಾರವಾಗಿ ಹೊರಭಾಗದಲ್ಲಿ ಒಂದು ಟ್ರೆಸನ್ನು ಹೀಗೆ ಒಟ್ಟು 2 ಟ್ರೆಸ್‌ಗಳನ್ನು ಅಳವಡಿಸಿರುವುದು ಸದರಿ ಕಾಮಗಾರಿಯ ಭೌತಿಕ ಪರಿಶೀಲನಾ ಸಮಯದಲ್ಲಿ ಕಂಡು ಬಂದಿರುತ್ತದೆ ಎಂದು, ತಾಂತ್ರಿಕ ಅಧಿಕಾರಿಗಳು ಅಳತೆಯನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದ ನಂತರ, ಸದರಿ ಕಾಮಗಾರಿಯು ಭೌತಿಕವಾಗಿ ಸುಸ್ಥಿತಿಯಲ್ಲಿ ಕೂಡಿದ್ದರಿಂದ ಹಣ ಪಾವತಿಸಲು ತಾನು ಹಾಗೂ ಅಧ್ಯಕ್ಷರು ಅಳತೆ ಪುಸ್ತಕದಲ್ಲಿ ಸಹಿ ಮಾಡಿದ್ದು, ತನಿಖಾಧಿಕಾರಿಗಳು ತನಿಖಾ ಕಾಲಕ್ಕೆ ಕಣ್ತಪ್ಪಿನಿಂದ ಹೊರಭಾಗದಲ್ಲಿ ಅಳವಡಿಸಿರುವ ಇನ್ನೊಂದು ಟ್ರೆಸ್ ಅನ್ನು ಗಮನಿಸಿರುವುದಿಲ್ಲ. ಆದ್ದರಿಂದ, ತಾವು ಕರ್ತವ್ಯದಲ್ಲಿ ನಿರ್ಲಕ್ಷತೆ ತೋರಿರುವುದಿಲ್ಲವೆಂದು ಹೇಳಿರುತ್ತಾರೆ.

ಶ್ರೀ ತಿಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ತಾವು ಎಂ.ಬಿ.ಪುಸ್ತಕದಲ್ಲಿ ಚೆಕ್ ಅಳತೆಗೆ ಸಹಿ ಹಾಕಿರುವುದಿಲ್ಲವೆಂದು, ಅಳತೆ ಪುಸ್ತಕದಲ್ಲಿ 'ಚೆಕ್ ಮೆಷರ್‌ಮೆಂಟ್ ಮಾಡದ ಬಿಲ್ಲನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿರವರು ಮತ್ತು ಪಂಚಾಯತ್ ಅಧ್ಯಕ್ಷರು ಪಾವತಿಸಿರುವುದರಿಂದ ಸದರಿ ಮೊತ್ತಕ್ಕೆ ತಾವು ಹೊಣೆಗಾರರವಲ್ಲವೆಂದು, ಕೆಡಬ್ಲ್ಯೂ ಕೋಡ್ ಪ್ಯಾರಾ 209 ಹಾಗೂ 301ರ ಪ್ರಕಾರ ಅಳತೆ ಪುಸ್ತಕದಲ್ಲಿ ಚೆಕ್ ಅಳತೆ ಹಾಕಿದರೆ ಮಾತ್ರ ದಂಡ ವಿಧಿಸಲು ಆದೇಶವಿದ್ದು, ಕಾರಣ ಸದರಿ ದುರ್ಬಳಕೆ ಮೊತ್ತದ ಅರ್ಧದಷ್ಟು ಹಣವನ್ನು ಅಂದರೆ ರೂ. 9,710/- ಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿರವರಿಂದ ವಸೂಲು ಮಾಡುವಂತೆ ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರವರು ತನಿಖಾ ವರದಿ, ಆಪಾದಿತರು ಸಲ್ಲಿಸಿರುವ ಆಕ್ಷೇಪಣೆಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, ಸದರಿ ಪ್ರಕರಣದಲ್ಲಿ ಮೇಲೆ ತಿಳಿಸಿರುವ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿನ ಆಪಾದಿತರುಗಳು ಒಟ್ಟು ರೂ. 18,421/- ಆರ್ಥಿಕ ನಷ್ಟಕ್ಕೆ ಜವಾಬ್ದಾರರಾಗಿದ್ದು ಕ್ರಮ ಸಂಖ್ಯೆ (3)ರಲ್ಲಿನ ಆಪಾದಿತ ಅಧಿಕಾರಿಯು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು, 2ನೇ ಟ್ರಸ್ಸಿನ ಬಾಬ್ತು ತಲಾ ರೂ. 9,210/- ಗಳನ್ನು ಶ್ರೀ ಜಿ.ವಿ.ಪ್ರಕಾಶ್, ಸಹಾಯಕ ಇಂಜಿನಿಯರ್ ಮತ್ತು ಶ್ರೀ ಎಂ.ತಿಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರುಗಳಿಂದ ಬಡ್ಡಿ ಸಮೇತ ಕಾನೂನಿನ ಅನ್ವಯ ವಸೂಲು ಮಾಡಲು ಕ್ರಮ ಕೈಗೊಳ್ಳುವಂತೆ ಮತ್ತು ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಸಕ್ಷಮ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸುತ್ತಾ, ಆಪಾದಿತರುಗಳ ವಿರುಧ್ಧದ ನಡವಳಿಕೆಯನ್ನು ಕೈ ಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದೂ, ಸದರಿಯವರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರದೆ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿಯವರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು, ತನಿಖಾ ವರದಿಯಲ್ಲಿನ ಅಂಶಗಳು ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿರುತ್ತದೆ. ಸದರಿ ದಾಖಲೆಗಳ ಪರಿಶೀಲನೆಯಿಂದ ಪ್ರಕರಣದಲ್ಲಿ ಭಾಗಿಯಾಗಿರುವ ಮೇಲೆ ತಿಳಿಸಿರುವ 3 ಜನ ಅಧಿಕಾರಿಗಳು ಪ್ರಸ್ತಾಪಿತ ಕಾಮಗಾರಿಗಳನ್ನು ಮಂಜೂರಾದ ಅಂದಾಜು ಪಟ್ಟಿ ಹಾಗೂ ಅಳತೆ ಪುಸ್ತಕದಲ್ಲಿ ದಾಖಲಿಸಿದ ಅನುಸಾರ ಮಾಡದೆ ಕರ್ತವ್ಯ ಲೋಪವನ್ನು ಎಸಗಿ ಸರ್ಕಾರಕ್ಕೆ ಒಟ್ಟು ರೂ. 18,421/- ಆರ್ಥಿಕ ನಷ್ಟ ಉಂಟು ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಅಧಿಕಾರಿಗಳು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು

---4

ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1)ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಇವರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವೆಂದು ಕಂಡು ಬಂದಿರುತ್ತದೆ. ಆದ್ದರಿಂದ, ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ : ಗ್ರಾಅಪ 85 ಇಎನ್‌ಕ್ಯೂ 2015 ಬೆಂಗಳೂರು, ದಿನಾಂಕ. 10-09-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಅಗಸನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 13ನೇ ಹಣಕಾಸಿನ ಕ್ರಿಯಾ ಯೋಜನೆಯಡಿಯಲ್ಲಿ ಅಗಸನಹಳ್ಳಿ ಗ್ರಾಮದಲ್ಲಿ ಕೈಗೊಳ್ಳಲಾದ ವಾಣಿಜ್ಯ ಮಳಿಗೆಗಳು ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ಧ್ವಜ ಕಟ್ಟೆಯ ಕಾಮಗಾರಿಗಳನ್ನು ಅಂದಾಜು ಪಟ್ಟಿ ಹಾಗೂ ಅಳತೆ ಪುಸ್ತಕದಲ್ಲಿ ದಾಖಲಿಸಿದ ಅನುಸಾರ ಮಾಡದೆ ಕರ್ತವ್ಯ ಲೋಪವನ್ನು ಎಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾಗಿದ್ದಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿಗಳ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ) ರ ಅನುಸಾರ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿದೆ:-

1. ಶ್ರೀ ಜಿ.ವಿ.ಪ್ರಕಾಶ್, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ.
2. ಶ್ರೀ ಎಂ.ತಿಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ.
3. ಶ್ರೀ ರಾಜಶೇಖರ್ ಪಾಟೀಲ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಗಸನಹಳ್ಳಿ ಗ್ರಾಮ ಪಂಚಾಯತ್, ಸೊರಬ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದೇಶ್ ಪೊತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ.
7. ಸಹಾಯಕ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

8. ಶ್ರೀ ಜಿ.ವಿ.ಪ್ರಕಾಶ್, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ.
9. ಶ್ರೀ ಎಂ.ತಿಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಉಪ ವಿಭಾಗ, ಕೂಡ್ಲಿಗಿ.
10. ಶ್ರೀ ರಾಜಶೇಖರ್ ಪಾಟೀಲ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಗಸನಹಳ್ಳಿ ಗ್ರಾಮ ಪಂಚಾಯತ್, ಸೊರಬ ತಾಲ್ಲೂಕು.

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
2. ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು – ಎ & ಸಿ).
3. ಅಧೀನ ಕಾರ್ಯದರ್ಶಿ, ಗ್ರಾಮ ಪಂಚಾಯತ್ ಶಾಖೆ, ಗ್ರಾ.ಅ.ಪಂ.ರಾಜ್ ಇಲಾಖೆ.
4. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
5. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಸೂಚನಾ ಫಲಕ : ಕಂಪ್ಯೂಟರ್ ಸೆಲ್.